ಮೂಡಬಿದರೆ ಸಮೀಪ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ.

62 (986) ಶ್ರೀ ಅಭಯಚಂದ್ರ ಜೈನ್ ಕೆ. (ಮೂಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 13ರಲ್ಲಿ ಮೂಡಬಿದರೆ ಸಮೀಪ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ ಸರ್ಕಾರವು ಸರ್ವೆ ಕಾರ್ಯಕ್ಕಾಗಿ ಹಣ ಮಂಜೂರಾತಿ ಮಾಡಿದ್ದು, ಸರ್ವೆ ಕಾರ್ಯ ಯಾವ ಹಂತದಲ್ಲಿದೆ;

ಆ) ಬೈಪಾಸ್ ರಸ್ತೆ ನಿರ್ಮಾಣ ಎಂದು ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:13ರ ಶಿವಮೊಗ್ಗ ಮಂಗಳೂರು ಭಾಗದ ರಸ್ತೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯನ್ನು NHDP Phase IV A ರಲ್ಲಿ ಸೇರ್ಪಡೆ ಮಾಡಿದ್ದು ಈಗಾಗಲೇ ಸಾಧ್ಯಾಸಾಧ್ಯತೆ ಅನ್ವೇಷಣಾ ಹಾಗೂ ತಾಂತ್ರಿಕ ವರದಿ (Feasibility study & detailed Engineering) ತಯಾರಿಸುವ ಕಾರ್ಯವನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯದ ತಾಂತ್ರಿಕ ಸಲಹೆಗಾರರಾದ M/s. Feedback Ventures Consultants, Bangalore ರವರಿಗೆ ವಹಿಸಿರುತ್ತಾರೆ. ಸದರಿ ಸಂಸ್ಥೆಯು ಈಗ Alignment & First Traffic. Survey ವರದಿಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಿದ್ದು ಈ ಬಗ್ಗೆ ಭೂಸಾರಿಗೆ ಮಂತ್ರಾಲಯವು ತೀರ್ಮಾನ ಕೈಗೊಳ್ಳಬೇಕಿದೆ.

ಆ) ಬೈಪಾಸ್ ರಸ್ತೆ ನಿರ್ಮಾಣದ ಬಗ್ಗೆ ಕೇಂದ್ರ ಭೂಸಾರಿಗೆ ಮಂತ್ರಾಲಯವು ತೀರ್ಮಾನ ಕೈಗೊಳ್ಳಬೇಕಿದೆ.

ಶ್ರೀ ಕೆ. ಅಭಯಚಂದ್ರ ಜೈನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ, ಮೂಡಬಿದರೆಯಲ್ಲಿ 1991ನೇ ಇಸವಿಯಲ್ಲಿ ಅಂದರೆ, ಸುಮಾರು 19 ವರ್ಷಗಳ ಹಿಂದೆ ಲೋಕೋಪಯೋಗಿ ಇಲಾಖೆಯಿಂದ ಬೈಪಾಸ್ ರಸ್ತೆ ಕಾಮಗಾರಿಗೆ ಅಡಿಗಲ್ಲು (foundation stone) ಹಾಕಲಾಗಿತ್ತು. ತದನಂತರ, ಮೂಡಬಿದರೆಯ ಲೋಕೋಪಯೋಗಿ ಇಲಾಖೆಯ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿ ಪರಿವರ್ತನೆಗೊಂಡಿತು. ಆ ರಸ್ತೆ

ಕಳೆದ 19 ವರ್ಷಗಳಿಂದ ಬೈಪಾಸ್ ಕಾಮಗಾರಿ ಆಗಲಿಲ್ಲ. ಇವತ್ತು ಈ ಕುರಿತಾದ ಪ್ರಸ್ತಾವನೆ NHDP ಗೆ ಹೋಗಿದ್ದು, ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿ ತಿಳಿಸಿದ್ದೀರಿ. ಆದರೆ, ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಲೋಕೋಪಯೋಗಿ ಇಲಾಖೆಯು ತೆಗೆದುಕೊಳ್ಳಬೇಕಾಗುತ್ತದೆ. ಪ್ರಸ್ತಾವ ಕೇಂದ್ರ ಸರ್ಕಾರಕ್ಕೆ ಹೋಗಿದ್ದರೂ, ಲೋಕೋಪಯೋಗಿ ಇಲಾಖೆಯು ಒತ್ತಡ ಹೇರಿದಲ್ಲಿ, ಅಲ್ಲಿ ಬೈಪಾಸ್ ರಸ್ತೆ ಕಾಮಗಾರಿ ಸಾಧ್ಯವಾಗುತ್ತದೆ. ಆದುದರಿಂದ ಮೂಡಬಿದರೆಯಲ್ಲಿ ಬೈಪಾಸ್ ರಸ್ತೆ ಕಾಮಗಾರಿಗೆ 19 ವರ್ಷಗಳ ಹಿಂದೆ ಅಡಿಗಲ್ಲು ಹಾಕಿದ್ದರೂ, ಇದುವರೆಗೂ ಬೈಪಾಸ್ ಕಾಮಗಾರಿ ಆಗಿರುವುದಿಲ್ಲ. ಆದಕಾರಣ, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಮೇಲೆ ತಮ್ಮ ಇಲಾಖೆಯು ಒತ್ತಡ ಹೇರಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ಸನ್ಮಾನ್ಯ ಸಭಾಧ್ಯಕ್ಷರೆ, ಸುಮಾರು 19 ವರ್ಷಗಳ ಹಿಂದೆ ಬೈಪಾಸ್ ರಸ್ತೆ ಕಾಮಗಾರಿಗೆ ಅಡಿಗಲ್ಲು ಹಾಕಲಾಗಿತ್ತು ಎನ್ನುವ ಮಾತುಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, ನಾನು 12 ವರ್ಷಗಳ ಹಿಂದೆ ಈ ಸ್ಥಳಕ್ಕೆ ಹೋದಾಗ, ಆ ಸ್ಥಳದಲ್ಲಿ ಬೈಪಾಸ್ ಕಾಮಗಾರಿ ಮಾಡಬೇಕಾಗಿದ್ದ ರಸ್ತೆ ಗುರ್ತಿಸಿರುವುದನ್ನು ನಾನು ನೋಡಿದ್ದೇನೆ. 19 ವರ್ಷಗಳ ಹಿಂದೆಯೇ ಈ ಕಾರ್ಯ ಆಗಿದ್ದಿದ್ದರೆ, ಈ ಕುರಿತಾದ ಹಣಕಾಸು, ಟೆಂಡರ್, ಇತ್ಯಾದಿ ಪ್ರಕ್ರಿಯೆಗಳಾಗುತ್ತಿದ್ದವು. ಆದರೆ, ಇದ್ಯಾವುದೇ ಪ್ರಕ್ರಿಯೆ ಆಗಿಲ್ಲ. ಈಗ ಅದರ ಬಗ್ಗೆ ನಾವು ಈಗ ಚರ್ಚಿಸುವುದು ಬೇಡ. ಇವತ್ತು ಏನು ನಡೆಯುತ್ತಿದೆ ಎಂಬುದರ ಬಗ್ಗೆ ನಾನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ. ಇವತ್ತು State support ನಿಂದ ಇದನ್ನು NHDP Phase IV A ನಲ್ಲಿ ಸೇರ್ಪಡೆಗೊಳಿಸಲಾಗಿದ್ದು, M/s. Feedback Ventures Consultants, Banglore ಇವರಿಂದ ಸರ್ವೆ ನಡೆಸಲಾಗಿದೆ. ಮೂಡಬಿದರೆಯಲ್ಲಿ ಬೈಪಾಸ್ ಕಾಮಗಾರಿ ಮಾಡುವುದನ್ನೂ ಇದರಲ್ಲಿ ಸೇರಿಸಿದ್ದಾರೆ. ಅತಿ ಶೀಘ್ರದಲ್ಲಿಯೇ ಈ ಕುರಿತು ತೀರ್ಮಾನ ಕೈಗೊಂಡು ಈ ಕೆಲಸ ಆಗುತ್ತದೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ನಾನು ಕೊಡುವುದಕ್ಕೆ ಇಚ್ಛಿಪಡುತ್ತೇನೆ.